# ಹೆತ್ತ ತಾಯಿ



❁ ಏನು, ಹೆತ್ತ ತಾಯಿ ಕಸಕಡ್ಡಿಯೆ! ಚೈತನ್ಯದೇವ ಎಷ್ಟೊಂದು ತನ್ನ ತಾಯಿಗೆ ಹೇಳಿ ಮಾಡಿ ಆಕೆಯಿಂದ ಸಂನ್ಯಾಸ ಸ್ವೀಕಾರಕ್ಕೆ ಅನುಮತಿ ಪಡೆದ. ಶಚಿ (ಚೈತನ್ಯದೇವನ ತಾಯಿ) ಹೇಳಿದಳಂತೆ: 'ನಾನು ಕೇಶವಭಾರತಿ(ಚೈತನ್ಯದೇವನಿಗೆ ಸಂನ್ಯಾಸ ಕೊಟ್ಟ ಯತಿ)ಯನ್ನು ಕತ್ತರಿಸಿ ಹಾಕುತ್ತೇನೆ' ಎಂದು. ಚೈತನ್ಯದೇವ ಬಹಳವಾಗಿ ಆಕೆಗೆ ಬುದ್ಧಿವಾದವನ್ನು ಇತ್ತ. ಹೇಳಿದ: 'ತಾಯೆ, ನೀನು ಅನುಮತಿ ಕೊಡದಿದ್ದರೆ ನಾನು ಮನೆಯನ್ನು ಬಿಟ್ಟು ಹೋಗುವುದಿಲ್ಲ. ಆದರೆ ಸಂಸಾರಿಯಾಗಲು ನನ್ನನ್ನು ನೀನು ಒತ್ತಾಯ ಮಾಡಿದೆಯೊ, ಈ ಶರೀರ ಮಾತ್ರ ಬದುಕಿರದು. ಒಂದು ಪಕ್ಷ ನೀನು ಅನುಮತಿ ಕೊಡುವುದೇ ಆದರೆ ಇಚ್ಛೆ ಬಂದಾಗಲೆಲ್ಲ ನೀನು ನನ್ನನ್ನು ನೋಡಬಹುದು. ನಾನು ಹತ್ತಿರವೆ ಇರಲು ಹೋಗುತ್ತೇನೆ. ಆಗಾಗ ಬಂದು ನೋಡಿ ಹೋಗುತ್ತೇನೆ!' ಎಂದು. ಆಗ ಮಾತ್ರ ಶಚೀದೇವಿ ಅನುಮತಿ ಕೊಟ್ಟಳಂತೆ. ತಾಯಿ ಬದುಕಿದ್ದಷ್ಟು ದಿವಸ ನಾರದ ತಪಸ್ಸಿಗೆ ಹೋಗಲಾಗಲಿಲ್ಲ. ತಾಯಿಯ ಸೇವೆ ಮಾಡಿಕೊಂಡಿರಬೇಕಾಗಿತ್ತು. ತಾಯಿಯ ದೇಹತ್ಯಾಗವಾದ ಮೇಲೇನೆ ಹರಿಯ ಸಾಕ್ಷಾತ್ಕಾರಕ್ಕಾಗಿ ಮನೆಬಿಟ್ಟು ಹೊರಟ.

❁ ಬೃಂದಾವನಕ್ಕೆ ಹೋಗಿ ಹಿಂದಿರುಗಿ ಬರಲಿಚ್ಛೆಯಾಗಲಿಲ್ಲ. ಅಲ್ಲಿ ಗಂಗಾಮಾಯಿಯೊಡನೆ ಇರಲು ಮಾತುಕತೆ ನಡೆಯಿತು. ಎಲ್ಲಾ ಚಾಚೂ ತಪ್ಪದೆ ವ್ಯವಸ್ಥೆಯಾಗಿಬಿಟ್ಟಿತು. ಈ ಕಡೆ ನನ್ನ ಹಾಸಿಗೆ, ಆ ಕಡೆ ಆಕೆಯ ಹಾಸಿಗೆ. 'ಕಲ್ಕತ್ತೆಗೆ ಹಿಂದಿರುಗುವುದಿಲ್ಲ; ಬೆಸ್ತರ ಮನೆ (ದಕ್ಷಿಣೇಶ್ವರದ) ಅನ್ನ ಇನ್ನೆಷ್ಟು ದಿನ ತಿನ್ನೋದು?' ಎಂದು ಯೋಚಿಸಿದೆ. ಆಗ ಹೃದೆ ಹೇಳಿದ: 'ಇದೆಲ್ಲ ನಡೆಯದ ಕಾರ್ಯ, ಕಲ್ಕತ್ತೆಗೆ ಹಿಂದಿರುಗಿ ಹೋಗೋಣ' ಎಂದು. ನನ್ನನ್ನು ಆತ ಒಂದು ಕಡೆಗೆ ಎಳೆಯಲಾರಂಭಿಸಿದ. ಗಂಗಾಮಾಯಿ ಇನ್ನೊಂದು ಕಡೆಗೆ ಎಳೆಯಲಾರಂಭಿಸಿದಳು. ನನಗೆ ಅಲ್ಲೇ ಇರಬೇಕೆಂಬ ಇಚ್ಛೆ ಬಹಳ. ಅಂಥ ಸಂದಿಗ್ಧ ಸಮಯದಲ್ಲಿ ನನ್ನ ಹೆತ್ತ ತಾಯಿ ಜ್ಞಾಪಕ ಬಂದಿತು. ಒಡನೆಯೆ ನನ್ನ ಪ್ಲಾನುಗೀನು ಎಲ್ಲ ಬದಲಾಯಿಸಿಬಿಟ್ಟಿತು. ತಾಯಿ ಮುದುಕಿಯಾಗಿದ್ದಳು. ಭಾವಿಸಿದೆ, 'ಹೆತ್ತ ತಾಯಿ ಚಿಂತೆ ತಲೆಗೆ ಹತ್ತಿಕೊಂಡಿತ್ತೆಂದರೆ ಈಶ್ವರ ದೂರ ಹೋಗಿಬಿಡುತ್ತಾನೆ. ಇಲ್ಲಿ ಇರುವುದಕ್ಕಿಂತ ಆಕೆಯೊಡನೆಯೆ ಹೋಗಿ ಇರುತ್ತೇನೆ. ಅಲ್ಲಿ ನಿಶ್ಚಿಂತೆಯಿಂದ ಭಗವಚ್ಚಿಂತನೆ ಮಾಡುತ್ತೇನೆ' ಎಂದು.

❁ ಭಗವತಿ ನಿನ್ನ ಹಡೆದ ತಾಯಿ. ಆಕೆ ಏನು ನಿನ್ನ ಮಲತಾಯಿಯೆ? ಆಕೆಯೊಡನೆ ಏನು ಕೃತಕ ಸಂಬಂಧವಿದೆಯೆ? ಆಕೆಯೊಡನೆ ಒತ್ತಾಯ ನಡೆಯೊ ಹಾಗಿಲ್ಲ ಎಂದರೆ ಬೇರೆ ಯಾರೊಡನೆ ತಾನೆ ಸಾಧ್ಯ? ಭಕ್ತಿಯ ತಾಮಸಿಕ ಭಾಗವನ್ನು ಉಪಯೋಗಿಸು.

❁ ಭಗವತಿಯನ್ನು ಬಲಾತ್ಕರಿಸಿ ಕೇಳು –

'ತಾಯಿಗೂ ಮಗನಿಗೂ ಏನು ಜಿದ್ದಿನ ಸ್ಪರ್ಧೆ !
ಎಂಥ ಲೀಲೆಯಿದಮ್ಮ ! ಕಾದಲಾರದೆ ಸೋತು
ನಿನ್ನ ತೋಳೊಳಗೆನ್ನ ಎತ್ತಿಕೊಳ್ಳುವನ್ನೆಗಂ
ನನ್ನ ಪೀಡನೆ ನಿಮಗೆ ತಪ್ಪದೆಂದಿಗೂ !'

ತ್ರೈಲೋಕ್ಯ ಒಮ್ಮೆ ಹೇಳಿದ, 'ಎಂದು ನಾನು ಅವರ ಮನೆಯಲ್ಲಿ ಜನ್ಮತಾಳಿದೆನೊ, ಅಂದಿನಿಂದಲೆ ನನ್ನ ಭಾಗದ ಹಿಸ್ಸೆ ಅಲ್ಲಿ ಇದ್ದೇ ಇದೆ.'

❁ ಭಗವತಿ ನಿನ್ನ ತಾಯಿ. ಜೋರು ಮಾಡಿ ಕೇಳು. ಯಾವುದು ಯಾವುದರ ಅಂಶವೊ ಅದು ಅದರಿಂದ ಆಕರ್ಷಿತವಾಗುತ್ತದೆ. ತಾಯಿಯ ಸತ್ವ ನಮ್ಮಲ್ಲಿ ಇರುವುದರಿಂದ, ಆಕೆಯ ಕಡೆಗೆ ಅಷ್ಟೊಂದು ಸೆಳೆತ. ನಿಜವಾದ ಶೈವ ಶಿವನ ಸತ್ವವನ್ನು ಪಡೆಯುತ್ತಾನೆ; ಕೆಲವು ಕಿಡಿ ಆತನ ಹೃದಯಕ್ಕೆ ಬಂದು ಬೀಳುತ್ತವೆ. ಯಾರು ನಿಜವಾದ ವೈಷ್ಣವನೊ ಆತನಲ್ಲಿ ನಾರಾಯಣನ ಸತ್ವವಿರುತ್ತದೆ.

❁ ಭಗವತಿಯನ್ನು 'ತಾಯಿ! ತಾಯಿ!' ಎಂದು ಸಂಬೋಧಿಸಿ ಪ್ರಾರ್ಥನೆ ಮಾಡುವುದು ಬಹಳ ಒಳ್ಳೆಯದು. ಜನ ಹೇಳುತ್ತಾರೆ, 'ತಾಯಿಯ ಒಲವು ತಂದೆಯದಕ್ಕಿಂತ ಅಧಿಕ' ಅಂತ. ತಾಯಿಯನ್ನು ಬಲಾತ್ಕರಿಸಿ ಕೇಳಬಹುದು, ಆದರೆ ತಂದೆಯೊಡನೆ ಅದು ನಡೆಯದು. ತ್ರೈಲೋಕ್ಯನ ತಾಯಿಯ ಜಮೀನುದಾರಿಕೆಯಿಂದ ಗಾಡಿ ಗಾಡಿ ಹಣ ಬರುತ್ತಿತ್ತು. ತಲೆಗೆ ಕೆಂಪು ರುಮಾಲನ್ನು ಸುತ್ತಿದ್ದ ಮತ್ತು ಕೈಯಲ್ಲಿ ಬೀಸುದೊಣ್ಣೆಯನ್ನು ಹಿಡಿದಿದ್ದ ಅಜಾನುಬಾಹು ಸಿಬ್ಬಂದಿಗಳು ಅವರೊಡನೆ ರಕ್ಷಕರಾಗಿ ಬರುತ್ತಿದ್ದರು. ತ್ರೈಲೋಕ್ಯ ತನ್ನ ಜನರೊಡನೆ ರಸ್ತೆ ಕಾಯುತ್ತಿದ್ದು ಬಲಪ್ರಯೋಗ ಮಾಡಿ ಅದನ್ನೆಲ್ಲ ಅಪಹರಿಸಿಕೊಂಡು ಬಿಟ್ಟ. ತಾಯಿಯ ಹಣದ ಮೇಲೆ ಮಗ ಕೈ ಇಡಲು ಸಾಧ್ಯ. ಜನ ಒಂದನ್ನು ಹೇಳುತ್ತಾರಲ್ಲ, 'ಮಗನ ಮೇಲೆ ಮೊಕದ್ದಮೆ ಹೂಡಲು ತಾಯಿಗೆ ಕೋರ್ಟಿನ ಅನುಮತಿ ದೊರಕದು' ಅಂತ.


❁ ನನ್ನ ತಾಯಿ ! ಯಾರು ನನ್ನ ತಾಯಿ? ಓ, ಆಕೆ ಈ ಜಗಜ್ಜನನಿ. ಈ ಜಗತ್ತನ್ನು ಸೃಷ್ಟಿಸಿರುವವಳು, ಪಾಲಿಸುತ್ತಿರುವವಳು ಅವಳೇ. ಅವಳೇ ಸರ್ವದಾ ತನ್ನ ಮಕ್ಕಳನ್ನು ನೋಡಿಕೊಳ್ಳುತ್ತಿರುತ್ತಾಳೆ. ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಲ್ಲಿ ಯಾವುದು ಯಾರಿಗೆ ಬೇಕಾದರೂ ಅದನ್ನು ಅವರಿಗೆ ಕೊಡುತ್ತಾಳೆ. ನಿಜವಾದ ಮಗು ತಾಯಿಯನ್ನು ಬಿಟ್ಟು ಇರಲಾರದು. ತಾಯಿಗೆ ಎಲ್ಲಾ ಗೊತ್ತು. ಮಗು ಉಂಡು ತಿಂದು ತಿರುಗಾಡಿಕೊಂಡಿರುತ್ತದೆ; ಈ ಜಗತ್ತಿನ ಸಂಬಂಧವಾಗಿ ಅದು ಏನನ್ನೂ ತಲೆಗೆ ಹಚ್ಚಿಕೊಂಡಿರುವುದಿಲ್ಲ.

**ಶ್ರೀರಾಮಕೃಷ್ಣ ವಚನವೇದದಿಂದ**

# ಸಮಗ್ರ ಶಿಕ್ಷಣದ ತತ್ತ್ವಗಳು ಮತ್ತು ಗುರಿಗಳು : ಶ್ರೀ ಅರವಿಂದರ ವಿಚಾರಧಾರೆ

**ಸರಗೂರು ರಮೇಶ್**

ಭಾರತದ ಶ್ರೇಷ್ಠ ಸಂತರಲ್ಲಿ ಒಬ್ಬರೂ, ಆಧುನಿಕ ಭಾರತದ ಮಹಾನ್ ಚಿಂತಕರೂ ಆದ ಶ್ರೀ ಅರವಿಂದರ ಶಿಕ್ಷಣ ವಿಚಾರಗಳ ಸಮೀಕ್ಷೆ ಇಲ್ಲಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಇಂಗ್ಲಿಷ್ ಉಪನ್ಯಾಸಕರು; ಉತ್ತಮ ವಾಗ್ಮಿಗಳೂ ಬರಹಗಾರರೂ ಆಗಿದ್ದಾರೆ. ಈ ಲೇಖನವನ್ನು ಮೈಸೂರು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆ (RIMSE)ಯ ವಾರ್ಷಿಕ ಸಂಚಿಕೆ '**ಪ್ರಬೋಧ**' ದಿಂದ ಆರಿಸಿಕೊಳ್ಳಲಾಗಿದೆ.



ಒಬ್ಬ ಮಹಾಯೋಗಿಯಾಗಿ, ಅಪ್ರತಿಮ ತತ್ತ್ವಜ್ಞರಾಗಿ, ದಾರ್ಶನಿಕ ಕವಿಯಾಗಿ ಮತ್ತು ಅಸಾಧಾರಣ ಸಾಹಿತ್ಯ ವಿಮರ್ಶಕರಾಗಿ ಶ್ರೀ ಅರವಿಂದರು ಜಗತ್ತಿನ ಚಿಂತಕರಿಗೆ ಪರಿಚಿತರು. ಆದರೆ ಅವರೊಬ್ಬ ಶ್ರೇಷ್ಠ ಶಿಕ್ಷಣತಜ್ಞರೂ ಆಗಿದ್ದಾರೆ ಎಂಬುದನ್ನು ಬಹು ಮಂದಿ ತಿಳಿದಿಲ್ಲ. ೧೮೯೩ ರಿಂದ ೧೯೦೬ರ ವರೆಗೆ ಬರೋಡ ಕಾಲೇಜಿನಲ್ಲಿ, ೧೯೦೬-೦೭ರ ವರೆಗೆ ಬೆಂಗಾಲ್ ನ್ಯಾಷನಲ್ ಕಾಲೇಜು, ಕಲ್ಕತ್ತಾದಲ್ಲಿ ಪ್ರಾಧ್ಯಾಪಕರಾಗಿ ಶ್ರೀ ಅರವಿಂದರು ಸೇವೆ ಸಲ್ಲಿಸಿದ್ದಾರೆ ಎಂಬುದು ಗಮನಿಸಬೇಕಾದ ಅಂಶ. ಪೂರ್ಣಯೋಗದ ಪ್ರತಿಪಾದಕರೂ, ಪೃಥ್ವಿಯ ಮೇಲೆ ದೇವಜಾತಿಯು ನರಜಾತಿಯೊಳಗಿಂದ ಉದ್ಭವಿಸಲಿರುವ ದರ್ಶನದ ಪ್ರವಾದಿಯೂ ಆದ ಶ್ರೀ ಅರವಿಂದರು ಹಲವು ಮೌಲಿಕವಾದ ಶಿಕ್ಷಣ ತತ್ತ್ವಗಳನ್ನು ಮನುಕುಲದ ಮುಂದಿಟ್ಟಿದ್ದಾರೆ. ಶಿಕ್ಷಣರಂಗದಲ್ಲಿ ಆಸಕ್ತಿ, ಶ್ರದ್ಧೆಗಳನ್ನು ಹೊಂದಿರುವ ಉತ್ಸಾಹಿಗಳಿಗೆ ಈ ತತ್ತ್ವಗಳು ಹೊಸ ಆಯಾಮಗಳನ್ನು ಮನಗಾಣಿಸುವುದರಲ್ಲಿ ಸಂದೇಹವಿಲ್ಲ.

ಮೊದಲಿಗೆ ಸ್ವಾಮಿ ವಿವೇಕಾನಂದರು ಹೇಳಿದಂತೆ ಸಮಸ್ತ ಜ್ಞಾನವು ಮಾನವನ ಅಂತರಾಳದಲ್ಲಿ ಈಗಾಗಲೇ ಸುಪ್ತವಾಗಿದೆ ಎಂಬುದನ್ನು ಶ್ರೀ ಅರವಿಂದರು ಅನುಮೋದಿಸುತ್ತಾರೆ. ಅವರ ಪ್ರಕಾರ ಶಿಕ್ಷಕನು ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ಮಾಡಬೇಕೇ ಹೊರತು ಒತ್ತಾಯವಾಗಿ ಹೊರಗಿನಿಂದ ವಿದ್ಯಾರ್ಥಿಗಳ ಮೇಲೆ ಏನನ್ನೂ ಹೇರುವಂತಿಲ್ಲ. ಜ್ಞಾನವನ್ನು ಬೆಳೆಸಿಕೊಳ್ಳಲು ಇರುವ ಸಾಧನಗಳನ್ನು ಹೇಗೆ ಸಿದ್ಧ ಮತ್ತು ದಕ್ಷಗೊಳಿಸಬೇಕು ಎಂದು ಆತನು ತೋರಿಸಿಕೊಟ್ಟು ಪ್ರೋತ್ಸಾಹಿಸಬೇಕು. ಬಾಹ್ಯ ಅವಲಂಬನೆಗಳಾದ ಪಠ್ಯಪುಸ್ತಕ, ಶಿಕ್ಷಕ, ವ್ಯಾಕರಣ ಇತ್ಯಾದಿಗಳನ್ನು ಬಿಟ್ಟು ಆಂತರ್ಯದಲ್ಲಿಯೇ ವಿದ್ಯಾರ್ಥಿಯು ಒಂದು ವಿಷಯವನ್ನು ತಿಳಿಯಲು ಪ್ರಯತ್ನಿಸಬೇಕು ಎಂಬುದು ಅವರ ಅಭಿಪ್ರಾಯ.

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಸ್ವಭಾವ ಮತ್ತು ಸ್ವಧರ್ಮವು ವಿಶಿಷ್ಟವಾಗಿರುವುದು ಎಂಬುದನ್ನು ಮರೆಯಬಾರದು. ಆ ದಿಕ್ಕಿನಲ್ಲಿ ಜೀವಿಯು ಪ್ರಯತ್ನಿಸಿದರೆ, ಜೀವನದಲ್ಲಿ ಸಾರ್ಥಕತೆಯನ್ನು ಹೊಂದಬಹುದು. ಇಂತಹ ವಿಶೇಷವಾದ ವಿಕಾಸ ಮಾರ್ಗವು ಪ್ರತಿಯೊಂದು ಜೀವಕ್ಕೂ ಭಗವಂತನು ನೀಡಿರುವ ಕೊಡುಗೆಯಾಗಿದೆ. ಈ ಸ್ವಭಾವವನ್ನು ಕಂಡುಹಿಡಿಯಬೇಕು, ಬೆಳೆಸಬೇಕು ಮತ್ತು ಬಳಸಬೇಕು. ಪೋಷಕ ಅಥವಾ ಶಿಕ್ಷಕ ತನ್ನಿಚ್ಛೆಯಂತೆ ವಿದ್ಯಾರ್ಥಿಗಳನ್ನು ಬಡಿದು, ಬಲವಂತದಿಂದ ರೂಪಿಸುವ ಅಗತ್ಯವಿರುವುದಿಲ್ಲ. ತನ್ನ ಸ್ವಭಾವಕ್ಕೆ ಅನುಗುಣವಾಗಿ ಹಿಗ್ಗಿ ವಿಕಾಸ ಹೊಂದಲು ಮಕ್ಕಳನ್ನು ಹುರಿದುಂಬಿಸಬೇಕು. ತನ್ನ ಮಗನು ಕೆಲವು ನಿರ್ದಿಷ್ಟ ಗುಣಗಳನ್ನು, ಸಾಮರ್ಥ್ಯಗಳನ್ನು, ನಡತೆಯನ್ನು ಬೆಳೆಸಿಕೊಂಡು ಒಂದು ಪೂರ್ವನಿಯೋಜಿತವಾದ ನೌಕರಿಯ ಜೀವನಕ್ಕೆ ಸಿದ್ಧವಾಗಬೇಕೆನ್ನುವ ಪೋಷಕರ ಬಯಕೆಯು ದೋಷಪೂರ್ಣವಾಗಿದೆ ಎನ್ನುತ್ತಾರೆ ಶ್ರೀ ಅರವಿಂದರು. ಇದರಿಂದ ಮಗುವಿನ ಬೆಳವಣಿಗೆ ವಿಕೃತವಾಗುತ್ತದೆ; ವಿಕಾಸವು ಕುಂಠಿತವಾಗುತ್ತದೆ ಮತ್ತು ರಾಷ್ಟ್ರಕ್ಕೆ ದೊಡ್ಡ ಹಾನಿಯಾಗುತ್ತದೆ. ಅಪೂರ್ಣವಾದ, ಕೃತ್ರಿಮ

ವಾದ, ಎರಡನೆ ದರ್ಜೆಯ, ಒತ್ತಾಯದಿಂದ ಹೊರಗಿನಿಂದ ಹೇರಲ್ಪಟ್ಟ ಸಂಗತಿಗಳು ಜೀವದ ಸ್ವಭಾವದ ಜೊತೆ ಸಮರಸವಾಗಿ ಹೊಂದಿಕೊಳ್ಳದೆ ಆತನು ರಾಷ್ಟ್ರಕ್ಕೆ ತಾನು ನಿಜವಾಗಿ ಏನನ್ನು ಕೊಡಲು ಸಮರ್ಥನಾಗಬಹುದಿತ್ತೋ ಅದನ್ನು ಕೊಡಲಾಗದವನಾಗುತ್ತಾನೆ ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾನೆ.

ಪ್ರತಿಯೊಂದು ಮಗುವೂ ತನ್ನೊಳಗೆ ಬೆಳೆದಿರುವ ಮತ್ತು ಹೊರಗಿನಿಂದ ಬಂದು ಸೇರಿರುವ ಅನೇಕ ಸಂಸ್ಕಾರಗಳನ್ನು ಹೊಂದಿರುತ್ತದೆ. ಆದ್ದರಿಂದ ಶಿಕ್ಷಕನಿಗೆ ಈ ಮೂಲಭೂತ ವಾಸ್ತವಿಕ ತಿಳಿವಳಿಕೆ ಇರುವುದು ಸೂಕ್ತ. ಆತುರ ಮತ್ತು ಅಜ್ಞಾನದಿಂದ ದುಡುಕಿ, ತಮಗೆ ಸಹಜವಾಗಿರುವ ನೆಲ, ಪರಿಸರ, ಹಿನ್ನೆಲೆಯಿಂದ ಮಕ್ಕಳನ್ನು ವಿಚ್ಛೇದನಗೊಳಿಸಿ, ಮೇಲೆತ್ತಿ ಒಂದು ಪರಕೀಯವೂ, ಅನ್ಯವೂ ಆದ ಸನ್ನಿವೇಶದಲ್ಲಿ ಬಿಡುವುದು ಆತ್ಮಘಾತಕವಾಗಿದೆ ಎಂದು ಎಚ್ಚರಿಸುತ್ತಾರೆ ಶ್ರೀ ಅರವಿಂದರು. ಹೊರಗಿನ ಸಂಗತಿಗಳನ್ನು ನೀಡುವಾಗ ಅದನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಡಬೇಕು. ಮುಕ್ತವೂ, ಸಹಜವೂ ಆದ ಬೆಳವಣಿಗೆಯೇ ಸಮರ್ಪಕವಾದ ಮತ್ತು ನೈಜ ಪ್ರಗತಿಯ ಲಕ್ಷಣ.

ಒಂದು ರಾಷ್ಟ್ರವೆಂದರೆ ಕೇವಲ ಭೂಮಿಯ ಒಂದು ತುಣುಕಲ್ಲ; ಒಂದು ಜನಾಂಗವೆಂದರೆ ಐತಿಹಾಸಿಕ ಒತ್ತಡಗಳಿಂದ ಒಂದೆಡೆ ಅಕಸ್ಮಾತ್ತಾಗಿ ಸೇರಿರುವ ಗುಂಪಲ್ಲ. ವಿಶ್ವಾತ್ಮ ಅಥವಾ ವಿಶ್ವಪುರುಷನ ಒಂದು ವಿಶೇಷ ಅಭಿವ್ಯಕ್ತಿಯೇ ರಾಷ್ಟ್ರವೆನ್ನುತ್ತಾರೆ ಶ್ರೀ ಅರವಿಂದರು. ವ್ಯಕ್ತಿಗೆ ಸ್ವಭಾವ-ಸ್ವಧರ್ಮಗಳಿರುವಂತೆ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ಸ್ವಭಾವ-ಸ್ವಧರ್ಮಗಳಿವೆ. ಜಾಗತಿಕ ಸನ್ನಿವೇಶದಲ್ಲಿ ಆ ರಾಷ್ಟ್ರವು ಮಾತ್ರವೇ ನಿರ್ವಹಿಸಬಹುದಾದ ಒಂದು ದೈವದತ್ತ ಪಾತ್ರವಿದೆ. ಭಾರತವು ತಾನು ತನ್ನ ನಿರ್ದಿಷ್ಟ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಒಂದು ರಾಷ್ಟ್ರೀಯ ಶಿಕ್ಷಣದ ಪರಿಕಲ್ಪನೆಯು ಅತ್ಯಗತ್ಯ ಎಂಬುದು ಶ್ರೀ ಅರವಿಂದರ ಕಾಣ್ಕೆ. ಅಂದರೆ ಹಿಂದೆ ಇದ್ದಂತಹ ಶಿಕ್ಷಣದ ಮಾದರಿಗಳ ಪುನರುಜ್ಜೀವನವಲ್ಲ. ಅವು ಅಂದು ಎಷ್ಟೇ ಪವಿತ್ರವೆನಿಸಿದರೂ ಇಂದು ಶಿಥಿಲವಾಗಿ ನಶಿಸಿವೆ. ನಮ್ಮ ಸ್ಫೂರ್ತಿಯ ನೆಲೆಯನ್ನು ಸ್ಪಷ್ಟವಾಗಿ ಗುರುತಿಸಿ ಬಹಿರಂಗದ ರಚನೆಗಳಿಗೆ ಮುಂದಾಗಬೇಕು. ಆತುರದಲ್ಲಿ ವಿದೇಶದ ಮಾದರಿಗಳನ್ನು ಹಿಂದು-ಮುಂದು ಯೋಚಿಸದೆ ಅಳವಡಿಸಿಕೊಳ್ಳುವುದು ರಾಷ್ಟ್ರೀಯ ಶಿಕ್ಷಣವೆನಿಸುವುದಿಲ್ಲ. ರಚನಾತ್ಮಕವಾದ ಹೊರಗಿನ ಅಂಶಗಳನ್ನು ಸ್ವೀಕರಿಸಿ, ಅರಗಿಸಿಕೊಂಡು ನಮ್ಮದನ್ನಾಗಿ ಮಾಡಿಕೊಳ್ಳಬೇಕಾದ ಅಗತ್ಯವೂ ಇದೆ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ಹಾಗೆ ಹೊರಹೊಮ್ಮುವ ರಾಷ್ಟ್ರೀಯ ಶಿಕ್ಷಣದ ಪರಿಕಲ್ಪನೆಯು ಪರಿಣಾಮ ಪಥದಲ್ಲಿ ವಿಕಾಸ ಹೊಂದುತ್ತಿರುವ ಭಾರತದ ಆತ್ಮಕ್ಕೆ ವಿಧೇಯವಾಗಿರುತ್ತದೆ; ಭಾರತದ ಭವಿಷ್ಯಕ್ಕೆ ಪೂರಕವಾಗಿರುತ್ತದೆ. ಭಾರತಮಾತೆಯ ನಿತ್ಯವಾದ ಚೇತನಕ್ಕೆ ಅದು ಸ್ಪಂದಿಸಿ, ಆ ಮಹೋನ್ನತ ಆದರ್ಶದ ಧ್ವನಿಯಾಗಿರುತ್ತದೆ. ರಾಷ್ಟ್ರೀಯ ಶಿಕ್ಷಣದ ಪರಿಕಲ್ಪನೆಯು ಶಿಕ್ಷಣರಂಗವನ್ನುಭಾರತೀಯ ಮನಸ್ಸು ಮತ್ತು ಸ್ವಭಾವದ ಮಹತ್ತರ ಸಾಧ್ಯತೆಗಳ ಕರ್ಮಭೂಮಿಯಾಗಿ ನೂತನವಾಗಿ ಸಿದ್ಧಗೊಳಿಸಬೇಕಾಗಿದೆ. ಇದು ಭಾರತವು ಮತ್ತೆ ಹಿಂದುಹಿಂದಕ್ಕೆ ಹೆಜ್ಜೆ ಇಡುವ



ಪ್ರಕ್ರಿಯೆಯಲ್ಲ; ಬದಲಿಗೆ, ತನ್ನೊಳಗೇ ಇರುವ ಪ್ರಚ್ಛನ್ನ ಶಕ್ತಿ ಸಾಮರ್ಥ್ಯಗಳು ಅಡ್ಡಿ ಆತಂಕಗಳನ್ನು ಕಿತ್ತೊಗೆದು, ದಾಪುಗಾಲಿಡುತ್ತಾ ಮುನ್ನಡೆಯುವ ಧೀರಚಲನೆಯಾಗಿದೆ ಎನ್ನುತ್ತಾರೆ ಶ್ರೀ ಅರವಿಂದರು.

ಮಕ್ಕಳ ಮನಸ್ಸಿನ ಸಾಮರ್ಥ್ಯವನ್ನು ಹಿಗ್ಗಿಸಿ ವಿಸ್ತರಿಸದೆ, ಬರಿ ಮಾಹಿತಿ ಮತ್ತು ವಿಷಯ ಜ್ಞಾನದ ಭೂತಾಕಾರದ ಸೌಧಗಳನ್ನು ನಿರ್ಮಿಸುವುದು ಶ್ರೀ ಅರವಿಂದರ ಪ್ರಕಾರ ಅವೈಜ್ಞಾನಿಕವಾಗಿದೆ. ಬುನಾದಿಯೇ ಭದ್ರವಿಲ್ಲದ ಮೇಲೆ, ಅದರ ಮೇಲೆ ಅಪಾರ ತೂಕದ ಸಾಮಗ್ರಿಗಳಿಂದ ನಿರ್ಮಿಸಿದ ಕಟ್ಟಡವು ನಿಲ್ಲುವುದೆ?

ಮಕ್ಕಳಲ್ಲಿರುವ ಬುದ್ಧಿಶಕ್ತಿಯು ಮುಕ್ತವಾಗಿ, ಸ್ವಚ್ಛಂದವಾಗಿ ಅಧ್ಯಯನ ಮಾಡಲಿರುವ ವಿಷಯದ ಎಲ್ಲಾ ಪಾರ್ಶ್ವಗಳಲ್ಲಿಯೂ ಕ್ರೀಡಿಸುವುದನ್ನು ಕಲಿಯಬೇಕು; ಹಾಗೆ ಕಲಿಯಲು ಪ್ರೋತ್ಸಾಹಿಸಬೇಕು. ಕಲಿಕೆಯ ಉಪಕರಣಗಳಾದ ಮನಸ್ಸು, ಬುದ್ಧಿ, ತರ್ಕ, ಸ್ಮೃತಿ, ಚಿತ್ತ ಇತ್ಯಾದಿಗಳು ಹಾಳಾಗಿ ಕುಗ್ಗಿಹೋಗದಂತೆ ದೋಷಮುಕ್ತ ವಿಧಾನದಿಂದ ಅದನ್ನು ತಡೆಯಬೇಕು. ಮಾಹಿತಿಯು ಬುದ್ಧಿಶಕ್ತಿ ಮತ್ತು ತಿಳುವಳಿಕೆಯ ಆಧಾರವಲ್ಲ. ಜ್ಞಾನ ನಿರ್ಮಾಣಕ್ಕೆ ಒದಗಿ ಬರುವ ಸಾಮಗ್ರಿ ಅದು. ನಾವು ಅದನ್ನು ಬಳಸಿಕೊಂಡು ಹೊಸ ಆವಿಷ್ಕಾರದೆಡೆಗೆ ಮತ್ತು ಹೆಚ್ಚು ವಿಸ್ತಾರವಾದ ದೃಷ್ಟಿಕೋನದೆಡೆಗೆ ಪ್ರಗತಿ ಹೊಂದುತ್ತಾ ಹೋಗಬೇಕಾಗಿದೆ. ಆದ್ದರಿಂದ ಶಿಕ್ಷಕನು ಮಗುವಿನಲ್ಲಿರುವ ಸಾಮರ್ಥ್ಯಗಳಾದ ಸ್ಮೃತಿಶಕ್ತಿ, ಕಲ್ಪನೆ, ತಾರ್ಕಿಕ ಬುದ್ಧಿ, ತೀರ್ಮಾನಿಸುವ ಶಕ್ತಿ, ಏಕಾಗ್ರತೆ ಇತ್ಯಾದಿಗಳನ್ನು ತರಬೇತಿ ಕೊಟ್ಟು ಬೆಳೆಸುವುದು ಹೇಗೆ ಎಂದು ಕಂಡುಕೊಳ್ಳಬೇಕು.

ನೇರವಾಗಿ, ದಿಟ್ಟವಾಗಿ ಮಾತನಾಡುವ, ಪ್ರಾಮಾಣಿಕತೆ, ಘನತೆಯ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು, ಜ್ಞಾನಕ್ಕಾಗಿ ದಾಹ, ಚಿಂತನೆ, ಭಾವನೆ ಮತ್ತು ಕ್ರಿಯೆಯಲ್ಲಿ ಪರಿಶುದ್ಧಿಯನ್ನು ಸಾಧಿಸುವುದು, ಧೈರ್ಯ, ಸಹಾನುಭೂತಿ, ಕೌಶಲ್ಯ, ಸದಭಿರುಚಿ, ಕಾರ್ಯದಕ್ಷತೆ, ಸಮತೋಲನ, ಇಚ್ಛಾಶಕ್ತಿಯ ದೃಢತೆ, ಮುಂತಾದವನ್ನು ಬೆಳೆಸಿಕೊಳ್ಳಲು ಮಕ್ಕಳಿಗೆ ನೆರವಾಗಬೇಕು. ಏಕೆಂದರೆ ಮನುಷ್ಯನು ಮಾನವತ್ವದಿಂದ ದೈವತ್ವದೆಡೆಗೆ ಅವಸ್ಥಾಂತರ